ಸಾಮಾಜಿಕಶ್ರೇಣೀಕರಣದಮೇಲೆಶಿಕ್ಷಣದಖಾಸಗೀಕರಣದಪರಿಣಾಮ

- ಅಮನ್ ಮದಾನ್

ದೊಡ್ಡ ಪ್ರಮಾಣದಲ್ಲಿ ಆಂತರಿಕ ಅಸಮಾನತೆಯನ್ನು ಹೊಂದಿರುವ ಭಾರತ ಅಥವಾ ಅಂತಹ ಯಾವುದೇ ದೇಶದ ಸಮಸ್ಯೆಗಳಿಗೆ ಶಾಲೆ ಅಥವಾ ಕಾಲೇಜು ಶಿಕ್ಷಣದ ಖಾಸಗೀಕರಣವು ಸಮಾಧಾನಕರ ಪರಿಹಾರವಾಗಲಾರದು ಎಂಬುದನ್ನು ನಾನಿಲ್ಲಿ ಪ್ರತಿಪಾದಿಸುತ್ತಿದ್ದೇನೆ. ಖಾಸಗೀಕರಣ ಎಂಬುದರ ಅರ್ಥವನ್ನು ಮೊದಲು ಸ್ಪಷ್ಟಗೊಳಿಸಿಕೊಳ್ಳುವುದು ಸಹಕಾರಿಯಾದೀತು. ಈ ಪದ ಬಳಕೆಯ ಅಗಾಧ ವ್ಯಾಪ್ತಿಯ ವಾದಿಸಬಹುದಾದರೂ . ಈ ಲೇಖನದಲ್ಲಿ ನಾನು ಖಾಸಗೀಕರಣ ಎಂಬ ಪದವನ್ನು ಮುಖ್ಯವಾಗಿ ಬಳಸುವುದು ,ಪಾಲಕ/ಪೋಷಕರಿಂದ ತೆಗೆದುಕೊಂಡ ಶುಲ್ಕವನ್ನೇ ಶಾಲಾ ಶಿಕ್ಷಕರ ವೇತನ, ಶಾಲಾ ನಿರ್ವಹಣೆ ಇತ್ಯಾದಿ ವೆಚ್ಚಗಳಿಗೆ ಮುಖ್ಯ ಸಂಪನ್ಮೂಲವನ್ನಾಗಿ ಮಾಡಿಕೊಂಡಿರುವ ಶಾಲೆ ಅಥವಾ ಕಾಲೇಜುಗಳನ್ನು ಸೂಚಿಸಲು. ಇದು ಪ್ರಮುಖ ವೆಚ್ಚಗಳನ್ನು ಸರ್ಕಾರೀ ಅನುದಾನ, ಸಮುದಾಯದ ದೇಣಿಗೆ ಅಥವಾ ಮಾನವ ಹಿತದ ಕುರಿತಾಗಿ ಅತೀವ ಕಾಳಜಿಯನ್ನುಳ್ಳ ಲೋಕೋಪಕಾರಿಗಳ ಕೊಡುಗೆಯಿಂದ ಭರಿಸುವ ಶಾಲೆಗಳಂತಲ್ಲ, ಖಾಸಗೀಕರಣಎಂಬುದರಲ್ಲಿವಿದ್ಯಾರ್ಥಿಗಳುತೆಗೆದುಕೊಳ್ಳುವಶೈಕ್ಷಣಿಕಸಾಲವನ್ನು ಆದಾಯದ ಮೂಲಗಳಲ್ಲೊಂದಾಗಿಸಿಕೊಂಡಿರುವ ಶಾಲಾ-ಕಾಲೇಜುಗಳಬೆಳವಣಿಗೆಯನ್ನೂಕೂಡ ನಾನು ಸೇರಿಸುತ್ತಿದ್ದೇನೆ. ಏಕೆಂದರೆ, ಅವುಗಳನ್ನೂಕೂಡಕೊನೆಗೆವ್ಯಕ್ತಿಗತವಾಗಿವಿದ್ಯಾರ್ಥಿಗಳುಅಥವಾಅವರಕುಟುಂಬಗಳುಪಾವತಿಸಲೇಬೇಕಾಗುತ್ತದೆ.ಆದ್ದರಿಂದ ಸರ್ಕಾರದಿಂದ ನಡೆಸಲ್ಪಡುವ ಶಾಲೆಯೇ ಆದರೂ ಅದರ ಬಹುತೇಕ ವೆಚ್ಚಗಳನ್ನು ಶಾಲಾಶುಲ್ಕದ ಮೂಲಕವೇ ಭರಿಸುತ್ತಿದ್ದಲ್ಲಿ ಅದನ್ನು ಖಾಸಗೀಕರಣದ ಒಂದು ರೂಪವೇ ಎನ್ನಬಹುದು. ಶೈಕ್ಷಣಿಕ ಸಾಮಗ್ರಿಗಳೂ ಸೇರಿದಂತೆ ಶಿಕ್ಷಣದ ಬಹುತೇಕ ಭೌತಿಕ ವೆಚ್ಚವನ್ನು ಭರಿಸುವಂತೆ ವಿದ್ಯಾರ್ಥಿಯನ್ನು ಕೇಳುವುದು, ಮುಖ್ಯವಾಗಿಸಮಾಜದಲ್ಲಿ 'ಖಾಸಗೀತನ' ಎಂಬ ಎಂಬ ಪರಿಕಲ್ಪನೆಯ ಸುತ್ತ ಹೆಣೆದುಕೊಂಡಿದೆ. . ಅಲ್ಲಿ ವ್ಯಕ್ತಿಯು ತಾನು ಪಡೆಯುವ ಖಾಸಗೀ ಲಾಭ ಅಥವಾ ಅನುಕೂಲತೆಗಳಿಗೆ ಬದಲಾಗಿ ವೆಚ್ಚವನ್ನು ಭರಿಸುತ್ತಿರುತ್ತಾನೆ. ಇದು, ವ್ಯಕ್ತಿ ಹಾಗೂ ಸಮುದಾಯಗಳೆರಡಕ್ಕೂ ಲಾಭಕಾರಿಯಾಗಿರುವ ಖಾಸಗೀ ಮತ್ತು ಸಾರ್ವಜನಿ ಕಪ್ರಯೋಜನಗಳನ್ನು ಒದಗಿಸುವ ನಿಟ್ಟಿನಲ್ಲಿ ಶಿಕ್ಷಣದ ಬಹುತೇಕ ಭೌತಿಕವೆಚ್ಚಗಳನ್ನು ಸಮಾಜವೇಭರಿಸುವ ಸನ್ನಿವೇಶಕ್ಕೆ ವಿರುದ್ಧವಾದುದಾಗಿದೆ.

ಇಲ್ಲಿ, ಆಯ್ಕೆ ಮತ್ತು ಮಾರುಕಟ್ಟೆ ವ್ಯವಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಅತ್ಯುತ್ತಮ ವಿಧಾನಗಳು ಹೌದೇ ಅಲ್ಲವೇ, ಅಥವಾ ಸರ್ಕಾರ/ಪ್ರಭುತ್ವವು ನಿಜವಾಗಿಯೂ ಸಾಮಾಜಿಕ ಹಿತಾಸಕ್ತಿಗಳ ಅತ್ಯುತ್ತಮ ಪ್ರತಿನಿಧಿಯೇ ಎಂಬ ಪ್ರಶ್ನೆಗಳು, ನವ-ಉದಾರವಾದೀ ಸಂಸ್ಕೃತಿಗಳ ಬೆಳವಣಿಗೆ ಎಂಬಂತೆ ಇನ್ನೂ ಅನೇಕ ವಿಷಯಗಳು ಎದುರಾಗುತ್ತವೆ. ಆದರೆ ನಾನು ಈ ಲೇಖನದಲ್ಲಿ ಅವುಗಳ ಕುರಿತು ಬರೆಯುತ್ತಿಲ್ಲ. ಅಸಮಾನತೆ ತುಂಬಿಕೊಂಡಿರುವ ಒಂದು ಸಮಾಜದಲ್ಲಿ ಖಾಸಗೀ ಹೂಡಿಕೆ ಹಾಗೂ ಖಾಸಗೀ ಆದಾಯಗಳಿಂದಾಗುವ ಸಮಸ್ಯೆಗಳೇನು ಎಂಬುದಕ್ಕೆ ಬರಹವನ್ನು ಸೀಮಿತಗೊಳಿಸಿಕೊಳ್ಳುತ್ತಿದ್ದೇನೆ.

ಒಂದು ಸಮಾಜದಲ್ಲಿ ಹಲವಾರು ಆರ್ಥಿಕ ವರ್ಗಗಳು ಅದಾಗಲೇ ಇದ್ದಾಗ, ಬಹುತೇಕವಾಗಿ ಪಾಲಕ/ಪೋಷಕರಸಂಪತ್ತಿನಿಂದಲೇ ಶಿಕ್ಷಣದ ವೆಚ್ಚಗಳು ಭರಿಸಲ್ಪಡುವುದು ಸಾಮಾಜಿಕ ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆಎನ್ನುವದನ್ನು ನಾನಿಲ್ಲಿ ಮೂಲಭೂತವಾಗಿ ಪ್ರಸ್ತಾಪಿಸುತ್ತಿದ್ದೇನೆ.

ಇದು ವಿಶೇಷವಾಗಿ, ಹೆಚ್ಚು ವೇತನವನ್ನು ನೀಡುವ ಉದ್ಯೋಗಗಳು ಸಂಖ್ಯೆಯಲ್ಲಿ ಕಡಿಮೆ ಇರುವ ಕಾರಣ ಎಲ್ಲ ವಿದ್ಯಾರ್ಥಿಗಳಿಗೆ ಉದ್ಯೋಗವನ್ನು ಒದಗಿಸಲಾರದ ಸನ್ನಿವೇಶವಿರುವ ಸಮಾಜದ ವಿಷಯದಲ್ಲಿ ಹೆಚ್ಚು ನಿಜ. ಉದಾಹರಣೆಯು ನಾನು ಹೇಳುವುದರ ಅರ್ಥವನ್ನು ಹೆಚ್ಚು ಸ್ಪಷ್ಟವಾಗಿ ವಿವರಿಸೀತು. ಭಾರತದಲ್ಲಿವರ್ಗಅಸಮಾನತೆ

ಭಾರತದಲ್ಲಿನವರ್ಗಅಸಮಾನತೆಯನ್ನುಅರ್ಥಮಾಡಿಕೊಳ್ಳಲುಅನೇಕವಿಧಾನಗಳಿವೆ. ಅವುಗಳಲ್ಲಿ ಸಂಬಂಧಾತ್ಮಕವಾದ ಅಂದರೆ, ವರ್ಗಗಳನ್ನು ಪರಸ್ಪರ ಅವುಗಳ ರಾಚನಿಕ ಸಂಬಂಧಗಳ ಅನುಸಾರದ ಮೇಲೆ ಗುರುತಿಸುವ ವಿಧಾನಗಳು ಅತ್ಯುತ್ತಮವಾದುವುಗಳು ಎಂದು ವಾದಿಸಬಹುದು. ವರ್ಗಗಳು ತಾವೊಂದೇ ಇರುವುದಿಲ್ಲ. ಜಾತಿ, ಪ್ರದೇಶ, ಧರ್ಮ, ಲಿಂಗ, ಜನಾಂಗೀಯತೆ ಇತ್ಯಾದಿಗಳೊಡನೆ ಅವು ಆಳವಾದ ಅಂತರ್ ಸಂಬಂಧವನ್ನುಹೊಂದಿರುತ್ತವೆ. ನಮ್ಮ ಉದಾಹರಣೆಗೆ ವರ್ಗ ಅಸಮಾನತೆಯನ್ನು ತೋರಿಸುವ ಒಂದು ಸರಳ ವಿಧಾನ ಸಾಕು. ಅದೆಂದರೆ, ಭಾರತದಲ್ಲಿರುವ ಜನರಲ್ಲಿ ಎಷ್ಟು ಜನ ಶ್ರೀಮಂತರು ಹಾಗೂ ಎಷ್ಟು ಜನ ಬಡವರು ಎನ್ನುವ ಪ್ರಶ್ನೆಯನ್ನು ಕೇಳುವುದು. ಸಾಧಾರಣವಾಗಿ ಇದನ್ನು ಕುಟುಂಬಗಳ ಆದಾಯವನ್ನು ಸೂಚಿಸುವ ಕೋಷ್ಠಕದ ಮೂಲಕ ತೋರಿಸಲಾಗುತ್ತದೆ. ಆದರೆ ಬಹಳಷ್ಟು ಜನರು ತಮ್ಮ ನಿಜವಾದ ಆದಾಯವನ್ನು ಹೇಳಲು ಒಪ್ಪದೇ ಇರುವ ಕಾರಣ, ಅದರ ಬದಲಾಗಿ ಉಪಭೋಗ ಅಥವಾ ವಸ್ತು ಮತ್ತು ಸೇವೆಗಳ ಬಳಕೆಯ ಕುರಿತಾದ ಮಾಹಿತಿಯನ್ನು ಸಂಗ್ರಹಿಸಿ ಪರಿಶೀಲನೆಗೊಳಪಡಿಸುವ ರೀತಿಯು ರೂಢಿಯಲ್ಲಿದೆ. ನಡೆಸಲಾಗುವ ಸಮೀಕ್ಷೆಗಳಲ್ಲಿ ಜನರು ಕಳೆದ ತಿಂಗಳಿನಲ್ಲಿ ಎಷ್ಟು ಆಹಾರ ಪದಾರ್ಥಗಳನ್ನು ಖರೀದಿಸಿದರು/ಉಪಭೋಗಿಸಿದರು, ಎಷ್ಟು ಮೊತ್ತದ ಶಾಲಾಶುಲ್ಕವನ್ನು ಪಾವತಿಸಿದರು, ಎಷ್ಟು ಪತ್ರಿಕೆ/ನಿಯತಕಾಲಿಕೆಗಳನ್ನು ಖರೀದಿಸಿದರು, ಚಲನಚಿತ್ರ ವೀಕ್ಷಣೆಗೆ ಎಷ್ಟು ಹಣವನ್ನು ವ್ಯಯಿಸಿದರು ಇತ್ಯಾದಿ ಪ್ರಶ್ನೆಗಳನ್ನು ಕೇಳಲಾಗುತ್ತದೆ.ಇದು ವಿವಿಧ ಕುಟುಂಬಗಳ ಹಾಗೂ ವ್ಯಕ್ತಿಗಳ ಸಂಪತ್ತನ್ನು ತುಲನೆ ಮಾಡಲು ಉಪಯುಕ್ತ ವಿಧಾನವಾಗಿದೆ. 2011-12 ರಲ್ಲಿ ಭಾರತದಲ್ಲಿ ಕೈಗೊಳ್ಳಲಾದ 68 ನೆಯ ರಾಷ್ಟ್ರೀಯ ಮಾದರಿ ಸರ್ವೇಕ್ಷಣ (National Sample Survey) ಕಾರ್ಯದಲ್ಲಿ 101,723 ಕುಟುಂಬಗಳ ಸಮೀಕ್ಷೆ ನಡೆಸಿ, ಉಳಿದ ಸಂಗತಿಗಳ ಜೊತೆಗೆ ಅವರ ಉಪಭೋಗ ವೆಚ್ಚವನ್ನು ಕುರಿತು ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಲಾಯಿತು. ಕುಟುಂಬಗಳ ಗಾತ್ರವು ಬೇರೆ ಬೇರೆಯಾಗಿರುತ್ತದೆ ಹಾಗೂ ಆರು ಜನ ಸದಸ್ಯರಿರುವ, ಮಾಸಿಕರೂ. 20,000 ಆದಾಯ ಹೊಂದಿರುವ ಕುಟುಂಬವೊಂದರ ಸ್ಥಿತಿಗತಿಯು ಅದೇ ಮೊತ್ತವನ್ನು ಸಂಪಾದಿಸುತ್ತಿರುವ ಹೆಚ್ಚು ಹೊಣೆಗಳಿಲ್ಲದ ಒಬ್ಬ ಅವಿವಾಹಿತ ವ್ಯಕ್ತಿಯ ಸ್ಥಿತಿಗತಿಗಿಂತ ಸಾಕಷ್ಟು ಭಿನ್ನವಾಗಿರುತ್ತದೆ. ಆದ್ದರಿಂದ ಉಪಭೋಗ ವೆಚ್ಚವನ್ನು ಕುಟುಂಬದ ಗಾತ್ರದಿಂದ ವಿಭಜಿಸಿ,ಮಾಸಿಕ ತಲಾ ಉಪಭೋಗ ವೆಚ್ಚ (Monthly Per Capita Expenditure) ಎಂದು ಕರೆಯಲಾಗುವ ಸಂಖ್ಯೆಯೊಂದನ್ನುಪಡೆಯಲಾಯಿತು. ಕೆಳಗಿನಕೋಷ್ಠಕದಲ್ಲಿವಿವಿಧಮೊತ್ತದ MPCE ಯನ್ನುಹೊಂದಿರುವಭಾರತದಜನಸಂಖ್ಯೆಯಶೇಕಡಾವಾರುಅಂಕಿಅಂಶಗಳನ್ನುಕೊಡಲಾಗಿದೆ.

ಮಾಸಿಕ ತಲಾ ಉಪಭೋಗ ವೆಚ್ಚ(MPCE)

| **ವೆಚ್ಚರೂ. ಗಳಲ್ಲಿ (MPCE)** | **ಶೇಕಡಾವಾರುಕುಟುಂಬಗಳು** | **ಸಂಚಿತ/ಒಟ್ಟಾರೆಶೇಕಡಾ** |
|---|---|---|
| <1000 | 33.3 | 33.3 |
| 1000 < 2000 | 42.1 | 75.5 |
| 2000 < 3000 | 13.1 | 88.5 |
| 3000 < 4000 | 5.4 | 93.9 |
| 4000 < 5000 | 2.3 | 96.3 |
| 5000 < 6000 | 1.3 | 97.6 |
| 6000 < 7000 | 0.7 | 98.3 |
| 7000 < 8000 | 0.4 | 98.7 |
| 8000 < 9000 | 0.3 | 99.0 |
| 9000 < 10000 | 0.2 | 99.3 |
| > 10000 | 0.7 | 100.0 |

ಇದು ನಮಗೆ ಹೇಳುವುದೇನೆಂದರೆ, 2011-12 ರಲ್ಲಿ ಭಾರತದ ಒಟ್ಟೂ ಜನಸಂಖ್ಯೆಯ ಶೇ.33 ಜನರು ಮಾಸಿಕ ತಲಾ ರೂ. 1000 ಕ್ಕಿಂತಲೂ ಕಡಿಮೆ ಆದಾಯದಲ್ಲಿ ಹಾಗೂ ಶೇ.75 ಜನರು ಮಾಸಿಕ ತಲಾ ರೂ. 2000 ಕ್ಕಿಂತಲೂ ಕಡಿಮೆ ಆದಾಯದಲ್ಲಿ ಜೀವನ ಸಾಗಿಸುತ್ತಿದ್ದರು. ತುಲನಾತ್ಮಕವಾಗಿ ನೋಡಿದಾಗ, ಮಧ್ಯಮದಿಂದ ಮೇಲು ಹಂತದ ವ್ಯವಸ್ಥಾಪಕ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಒಬ್ಬ ಭಾರತೀಯ ವ್ಯಕ್ತಿಯು ಪ್ರತೀ ತಿಂಗಳು ತಲಾ ರೂ. 10,000 ಕ್ಕೂಹೆಚ್ಚಿನ ಮೊತ್ತವನ್ನು ಉಪಭೋಗಕ್ಕಾಗಿ ಬಳಸುತ್ತಾನೆ/ಳೆ. 0.7% ಎನ್ನುವ ಸಂಖ್ಯೆತುಂಬಾ ಚಿಕ್ಕದಾಗಿ ಕಾಣುವುದಾದರೂ, ಅದನ್ನು120 ಕೋಟಿಜನಸಂಖ್ಯೆಯ 0.7 ಶೇಖಡವಾಗಿ ನೋಡಿದಾಗ 84 ಲಕ್ಷ ಜನಸಂಖ್ಯೆಯ ಆದಾಯ ಗುಂಪಾಗಿ ಕಂಡುಬರುತ್ತದೆ.. ಈ ಸಂಖ್ಯೆಗಳು ಎಷ್ಟು ದೊಡ್ಡವು ಎಂದರೆ, ಅದರಲ್ಲಿರುವ ವ್ಯಕ್ತಿಗಳು ತಮ್ಮದೇ ವರ್ಗದ ಜನರಿಂದ ಸುತ್ತುವರೆಯಲ್ಪಟ್ಟಿರುತ್ತಾರೆ ಹಾಗೂ ಅತ್ಯಂತ ಬಡವರ್ಗದವರು ಅವರಿಗೆ ನೋಡಲೂ ಸಿಗುವುದಿಲ್ಲ. ಹಾಗಿದ್ದರೂ, ಈದೇಶದ 75% ಜನರುಮಾಸಿಕತಲಾರೂ. 2000 ಕ್ಕಿಂತಲೂ ಕಡಿಮೆ ಹಣದಲ್ಲಿ ಆಹಾರ, ಔಷಧ, ಬಟ್ಟೆ, ಶಾಲೆ-ಕಾಲೇಜುಗಳ ಶುಲ್ಕ ಹೀಗೆ ಎಲ್ಲವನ್ನೂ ನಿಭಾಯಿಸಿ ಬದುಕುಳಿಯಬೇಕು ಎನ್ನುವುದು ಇಂದಿಗೂ ಸತ್ಯ

ಮೇಲಿನ ಕೋಷ್ಟಕವು ನಮಗೆ ಶಾಲಾ ಶಿಕ್ಷಣದ ವೆಚ್ಚವನ್ನು ಪರಿಶೀಲಿಸಲು ಬೇಕಾದ ಮಾಹಿತಿಯನ್ನು ನೀಡುತ್ತದೆ. ಇದರಿಂದಾಗಿ ಒಟ್ಟಾರೆ ಸಮಾಜದ ಬದಲಾಗಿ ಒಂದು ಕುಟುಂಬವು ಶಿಕ್ಷಣದ ವೆಚ್ಚಗಳನ್ನು ಭರಿಸಬೇಕು ಎಂಬ ನಿರೀಕ್ಷೆಯಿದ್ದಾಗ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯವಾಗುತ್ತದೆ.

ಖಾಸಗೀ ಶಾಲೆಯ ವೆಚ್ಚ

ಹೀಗೇ ಕ್ಷಿಪ್ರವಾಗಿ ಹಾಕಿದ ಒಂದು ಲೆಕ್ಕವೂ ಕೂಡ ಖಾಸಗೀ ಶಾಲೆ/ಕಾಲೇಜೊಂದನ್ನು ನಡೆಸಲು ಬೇಕಾದ ವೆಚ್ಚವನ್ನು ತೋರಿಸುತ್ತದೆ. ಅತ್ಯಂತ ದೊಡ್ಡ ಹಾಗೂ ಏಕಮೇವ ವೆಚ್ಚವೆಂದರೆ ಬಹುತೇಕವಾಗಿ ಶಿಕ್ಷಕರದೇ ಆಗಿರುತ್ತದೆ. (ಶಿಕ್ಷಕರಿಗೆ ಮಾಸಿಕರೂ. 4000ನ್ನು ವೇತನವಾಗಿ ನೀಡುವ ಶಾಲೆಗಳೂ ಇವೆ. ಆದರೆ ಅವುಗಳ ಗುಣಮಟ್ಟ ಶೋಚನೀಯ ಎನ್ನುವಂತದ್ದಾಗಿದೆ.) ನಾವು ಒಬ್ಬ/ಳು ಸುಸ್ಥಿರ ಹಾಗೂ ಸಾಕಷ್ಟು ಒಳ್ಳೆಯ ಶಿಕ್ಷಕ/ಕಿಗಾಗಿ ಮಾಡಬೇಕಾದ ವೆಚ್ಚವನ್ನುನೋಡೋಣ. ಸುಸ್ಥಿರ ಎಂಬ ಪದವನ್ನು ನಾನು ಬಳಸುವುದು ಉತ್ತಮ ಅವಕಾಶವನ್ನು ಪಡೆಯುವುದಕ್ಕಾಗಿ ಸದಾ ಹುದ್ದೆಯನ್ನು ಬದಲಾಯಿಸದ ಶಿಕ್ಷಕರನ್ನು ಗಮನದಲ್ಲಿಟ್ಟುಕೊಂಡು. ಕೆಳ ಮಧ್ಯಮವರ್ಗದ ಜನರೂ ಕೂಡ ಎಂಜಿನಿಯರಿಂಗ್ ಅಥವಾ ಅಕೌಂಟಿಂಗ್‌ನ್ನು ಹೇಗೆ ಶ್ರಮ ಹಾಕಲು ಯೋಗ್ಯ ಎಂದು ಪರಿಗಣಿಸುವರೋ ಅದೇ ರೀತಿ ಬೋಧನೆಯನ್ನು ಕೂಡ ಒಂದು ಒಳ್ಳೆಯ ಆಕಾಂಕ್ಷಿಸಬಹುದಾಂತ ವೃತ್ತಿಯಾಗಿ ಪರಿಗಣಿಸುವ ಹಾಗೆ, ಮತ್ತು ಶ್ರಮಪಟ್ಟು ಕೆಲಸ ಮಾಡಿ ಆ ವೃತ್ತಿಯನ್ನು ಪೋಷಿಸಿ ಬೆಳೆಸುವ ತರಹದಲ್ಲಿ ಶಿಕ್ಷಕರಿಗೆ ವೇತನವು ಇರಬೇಕಾದುದು ಅಗತ್ಯ.ಇಲ್ಲದಿದ್ದರೆ ನಮಗೆ ಸಿಗುವುದು ಒಲ್ಲದ ಮನಸ್ಸಿನ, ಅಷ್ಟೇನೂ ಅರ್ಹತೆಯಿಲ್ಲದ, ಬೋಧನೆಯನ್ನು ಒಂದು ಜೀವನೋತ್ಸಾಹ ತುಂಬಿತುಳುಕುವ ವೃತ್ತಿಯನ್ನಾಗಿ ಕಟ್ಟಿ ನಿಲ್ಲಿಸದ, ನಿರುತ್ಸಾಹೀ ಶಿಕ್ಷಕರ ಸಮೂಹವಷ್ಟೇ.

ಹಲವಾರು ಸರ್ಕಾರೇತರ ಸಂಘ-ಸಂಸ್ಥೆಗಳಲ್ಲಿನ ಜನರ ಬಳಿ ಹಾಗೂ ಚಿಕ್ಕಪಟ್ಟಣಗಳ ವಿದ್ಯಾರ್ಥಿಗಳ ಎದುರು, 'ಶಿಕ್ಷಕರಿಗೆ ಸುಸ್ಥಿರವೇತನ ಎಂದರೇನು?' ಎನ್ನುವಪ್ರಶ್ನೆಯನ್ನುಇಟ್ಟಾಗ, ಅವರುಸಾಮಾನ್ಯವಾಗಿಮಾಸಿಕರೂ. 20,000-25000 - 30,000 ಎಂದುಹೇಳುವುದನ್ನು ಕೇಳಿದ್ದೇನೆ. ನಾವು ರೂ. 25000 ವನ್ನುಮಧ್ಯದ ಮೊತ್ತವನ್ನಾಗಿ ಇಟ್ಟುಕೊಳ್ಳೋಣ.ಹಾಗಿದ್ದಾಗ, ಕುಟುಂಬವೊಂದೇ ಶಾಲಾ ವೆಚ್ಚವನ್ನು ಪಾವತಿಸಬೇಕಾದ ಸನ್ನಿವೇಶದಲ್ಲಿ ಒಬ್ಬ ವಿದ್ಯಾರ್ಥಿ/ನಿಯ ಶಾಲಾಶುಲ್ಕ ಏನಾಗಿರುತ್ತದೆ? 40 ವಿದ್ಯಾರ್ಥಿಗಳಿರುವ ಒಂದು ತರಗತಿಯಲ್ಲಿ ಶಿಕ್ಷಕ/ಕಿಯೊಬ್ಬರಿಗೆ ವೇತನದ ಸಲುವಾಗಿ ಪ್ರತೀ ವಿದ್ಯಾರ್ಥಿಗೆ ರೂ. 625 ವೆಚ್ಚವಾಗುತ್ತದೆ.ಅದಕ್ಕೆಕಟ್ಟಡ, ವಿದ್ಯುತ್‌ಶಕ್ತಿ, ಆಡಳಿತ, ಭದ್ರತೆ ಹಾಗೂ ಪ್ರಯೋಗಾಲಯ ವೆಚ್ಚ ಇತ್ಯಾದಿಗಳನ್ನು ಸೇರಿಸಬಹುದು. ಒಂದು ಶಾಲೆ ತನ್ನ ಸಂಪೂರ್ಣ ವೆಚ್ಚಗಳನ್ನು ತಾನೇ ಭರಿಸಬೇಕು, ಸಾಕಷ್ಟು ಒಳ್ಳೆಯ ಶಿಕ್ಷಕರನ್ನು ಹೊಂದಿರಬೇಕು ಎಂದಾದಲ್ಲಿ, ವಿದ್ಯಾರ್ಥಿಗಳಿಗೆ ಮಾಸಿಕರೂ. 1000 ಶುಲ್ಕವನ್ನು ವಿಧಿಸಬೇಕಾಗುವುದರಲ್ಲಿ ಆಶ್ಚರ್ಯವೇನೂ

ಅಲ್ಲ.ಈ ಮೊತ್ತವನ್ನು ಭಾರತದಲ್ಲಿನ MPCE ಕೋಷ್ಟಕಕ್ಕೆ ಎದುರಾಗಿ ಹಿಡಿದಾಗ ನನಗೆ ಹಠಾತ್ ಆಘಾತವಾಯಿತು. ತಲಾರೂ. 2000ಕ್ಕಿಂತಲೂಕಡಿಮೆವರಮಾನವಿರುವಕುಟುಂಬಗಳುಮಾಸಿಕರೂ. 1000 ರಶಾಲಾಶುಲ್ಕವನ್ನುಭರಿಸಬಲ್ಲವೇ? ಹಾಗೆಮಾಡುವುದುಕಷ್ಟವೇ. ನೆನಪಿಡಿಅದುಭಾರತದಜನಸಂಖ್ಯೆಯ 75%.
ಪರಿಣಾಮವುಊಹಿಸಬಹುದಾಗಿದ್ದೇ.ಸಂಪೂರ್ಣಶಿಕ್ಷಣವೆಚ್ಚವನ್ನುಕುಟುಂಬಗಳೇಭರಿಸಬೇಕಾದಶಾಲಾ-ಕಾಲೇಜುಗಳೇಇದ್ದಲ್ಲಿ. ಹೆಚ್ಚುಹಣವಿದ್ದವರುಹೆಚ್ಚಿನಶುಲ್ಕವನ್ನುಪಾವತಿಸಿ,
ಇದ್ದುದರಲ್ಲಿಯೇಒಳ್ಳೆಯಶಿಕ್ಷಕರನ್ನುಪಡೆದುಕೊಳ್ಳಬಹುದುಹಾಗೂಕಡಿಮೆಹಣವಿದ್ದವರು (ಸಾಧಾರಣವಾಗಿ) ಉತ್ತಮಶಿಕ್ಷಕರನ್ನುಪಡೆದುಕೊಳ್ಳಲುವಿಫಲರಾಗಬಹುದು. ಹಾಗಿದ್ದರೂಸವಲತ್ತು-
ಸೌಕರ್ಯಗಳಿಂದವಂಚಿತರಾದಮಕ್ಕಳಿಗೆನಿಃಸ್ವಾರ್ಥತೆಯಿಂದಬೋಧಿಸುವ, ಅರ್ಪಣಾಮನೋಭಾವನೆಯಿಂದಕೆಲಸಮಾಡುವ, ವೃತ್ತಿಗೆಬದ್ಧರಾದಶಿಕ್ಷಕರಕೆಲವುಅಪರೂಪದಉದಾಹರಣೆಗಳಿವೆ.
ಅವರನ್ನುನಾನುನಿಜಾರ್ಥದಲ್ಲಿಭಾರತದಧೀರೋದಾತ್ತರುಎಂದುಭಾವಿಸುತ್ತೇನೆ. ಆದರೆಬಹಳಷ್ಟುಜನಸಾಹಸಿಗಳಲ್ಲ, ಧ್ಯೇಯೋದಾತ್ತರಲ್ಲ.ಒಟ್ಟಾರೆಸಮಾಜದಹಿತದೃಷ್ಟಿಯಲ್ಲಿವಸ್ತುನಿಷ್ಠ (ಪ್ರಾಯೋಗಿಕ) ವ್ಯವಸ್ಥೆಗಳನ್ನುತರುವಮಾತುಕತೆ ನಡೆಯುತ್ತಿರುವಾಗನಾವು ಸಾಮಾನ್ಯ ಜನರ ಕುರಿತು ಹಾಗೂ ಉತ್ತಮ ಶಿಕ್ಷಕರಾಗುವಂತೆ ಅವರನ್ನು ಪ್ರೇರೇಪಿಸುವ ಸಂಗತಿ ಯಾವುದು ಮತ್ತು ಇಂತಹ ಪ್ರಾಯೋಗಿಕ ವ್ಯವಸ್ಥೆಗಳನ್ನು
ಸೃಷ್ಟಿಸುವಅಥವಾಸೃಷ್ಟಿಸದೇಇರುವವುದರಸಾಮಾಜಿಕಪರಿಣಾಮಗಳೇನುಎಂಬುದರಕುರಿತುಮಾತನಾಡಲೇಬೇಕು. ಎಲ್ಲೋ ಆಗೀಗೊಮ್ಮೆ ಸ್ವಹಿತವನ್ನು ತ್ಯಾಗಮಾಡಿ ಸಮುದಾಯದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುವ ಜೀವಿಗಳನ್ನು ಅವಲಂಬಿಸಿಕೊಂಡಿರಲು ಸಾಧ್ಯವಿಲ್ಲ.

ಶಿಕ್ಷಣದ ಖಾಸಗೀಕರಣದಿಂದಾಗಿ ಹೆಚ್ಚಿದ ಅಸಮಾನತೆ

ಸಮಾಜದಲ್ಲಿ ಗಣನೀಯ ಪ್ರಮಾಣದ ಅಸಮಾನತೆ ಇದೆ ಎಂದಾದರೆ,ಉದಾಹರಣೆಗೆ ನಮ್ಮ ಸಮಾಜದಲ್ಲಿ ನಾವು ಕಾಣುತ್ತಿರುವ ಹಾಗೆ, ಖಾಸಗೀ ಶುಲ್ಕದಿಂದ ನಡೆಯುವ ಶಿಕ್ಷಣದ ಪರಿಣಾಮವು ಹಣಕೊಡುವ ಸಾಮರ್ಥ್ಯದ ಹಂಚಿಕೆಗೆ ಹತ್ತಿರದಲ್ಲಿಯೇ ಜೊತೆಜೊತೆಗೇ ಇರುತ್ತದೆ. ಉನ್ನತ ಮಟ್ಟದಹಾಗೂಉತ್ತಮ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಹೆಚ್ಚು ಹಣ ನೀಡುವವರು ಹೆಚ್ಚು ಹಣವುಳ್ಳವರೇ ಆಗಿರುತ್ತಾರೆ.ಕಡಿಮೆ ಹಣವುಳ್ಳವರು ಏಣಿಯಲ್ಲಿ ಕೆಳಗೇ ಉಳಿದುಬಿಡುತ್ತಾರೆ. ಮೇಲಿದ್ದವರು ಇನ್ನಷ್ಟು ಪ್ರಬಲರಾಗಲು ಬಯಸಿದರೆ, ಕೇವಲ ತಮ್ಮ ವೈಯಕ್ತಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಆಸೆಪಟ್ಟರೆ, ಅದಾಗಲೇ ಬುಡಮಟ್ಟದಲ್ಲಿ ಅಗಾಧ ಗಾತ್ರದ ಅಸಮಾನತೆಯನ್ನು ಹೊಂದಿರುವ (ಪಿರಮಿಡ್ಆಕೃತಿ) ಈ ಸಮಾಜವು ಇನ್ನಷ್ಟು ಸಂಕುಚಿತವಾದ ಪಿರಮಿಡ್ ಆಕೃತಿಯ ರಚನೆಯುಳ್ಳದ್ದಾದೀತು. ಖಾಸಗೀಕೃತಶಿಕ್ಷಣದಬೆಳವಣಿಗೆಯುಪಿರಮಿಡ್‌ನ ಮೇಲು ಸ್ತರಗಳಲ್ಲಿ ಇರುವವರಿಗೆ ಅನುಕೂಲಕರವಾದೀತು ಹಾಗೂ ಕೆಳಸ್ತರಗಳಲ್ಲಿ ಇರುವವರನ್ನು ಇನ್ನಷ್ಟು ದುರ್ಬಲಗೊಳಿಸೀತು. ಮೇಲಿನ ಉದಾಹರಣೆ ವರ್ಗಅಸಮಾನತೆಹಾಗೂಶಿಕ್ಷಣಕ್ಕೆ ಸಂಬಂಧ ಪಟ್ಟದ್ದು. . ಜಾತಿ, ಪ್ರಾದೇಶಿಕ ಅಸಮಾನತೆ, ಲಿಂಗ ಅಸಮಾನತೆ ಇತ್ಯಾದಿಗಳಿಗೂ ಸಮಾಜವನ್ನು ಶ್ರೇಣೀಕರಿಸುವ ತಮ್ಮದೇ ಆದ ಅನನ್ಯ ಗುಣ ವಿಶೇಷಗಳು ಇರುವುದರಿಂದ ಅವುಗಳಿಂದಲೂ ಹೆಚ್ಚೂಕಡಿಮೆ ಇಂತಹುದೇ ಪರಿಣಾಮಗಳನ್ನು ನಿರೀಕ್ಷಿಸಬಹುದು. ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಕೆಲವು ಕುಟುಂಬಗಳ ಅನನುಕೂಲತೆಗಳನ್ನು ರಾಜ್ಯಾಡಳಿತ/ಪ್ರಭುತ್ವದಂತಹ ಬಾಹ್ಯ ಸಂಸ್ಥೆಗಳ ಮೂಲಕ ಸರಿದೂಗಿಸದೇ ಇದ್ದಲ್ಲಿ ಸಾಮಾಜಿಕ ಶ್ರೇಣೀಕರಣವು ಇನ್ನಷ್ಟು ಹೆಚ್ಚುತ್ತದೆ.

ಶಿಕ್ಷಣದ ಉದ್ದೇಶದ ಕುರಿತು ಆಲೋಚಿಸಿದ ಬಹುತೇಕ ಜನರು, ಒಳ್ಳೆಯ ಶಿಕ್ಷಣವನ್ನು ಪ್ರಬಲರಾದ ಕೆಲವೇ ಕೆಲವರಿಗೆ ಸೀಮಿತಗೊಳಿಸಿ. ಇನ್ನಿತರರಿಗೆ ಕಳಪೆ ಶಿಕ್ಷಣವನ್ನು ಉಳಿಸುವುದು ಅತ್ಯಂತ ಕೆಟ್ಟ ವಿಚಾರವೆನ್ನುವುದನ್ನು ಒಪ್ಪುವವರೇ. ಶಿಕ್ಷಣದ ಉದ್ದೇಶ, ಗೊತ್ತು ಗುರಿಗಳು ಹಲವಾರಿವೆ. ಸ್ಪಷ್ಟವಾಗಿ ಆಲೋಚಿಸುವ ಸಾಮರ್ಥ್ಯ, ಮಾಹಿತಿ-ಅರಿವಿನಿಂದ ಕೂಡಿದ ಆಯ್ಕೆ, ತನ್ನ ಬದುಕಿನ ಮೇಲೆ ಸ್ವತಃ ನಿಯಂತ್ರಣವನ್ನು ಹೊಂದಿರುವ ಸಾಮರ್ಥ್ಯ, ಸಾರ್ವಜನಿಕ ಜೀವನದಲ್ಲಿ ಸಕ್ರಿಯ ಹಾಗೂ ಚಿಂತನಶೀಲ ಭಾಗವಹಿಸುವಿಕೆ, ಅನ್ಯಾಯ ಹಾಗೂ ಶೋಷಣೆಯ ವಿರುದ್ಧ ಸಿಡಿದೇಳುವಿಕೆ ಇತ್ಯಾದಿಗಳು ಅವುಗಳಲ್ಲಿ

ಸೇರಿವೆ. ಇಂತಹ ಶಿಕ್ಷಣದ ಅಗತ್ಯವಿರುವುದು ಶ್ರೀಮಂತರಿಗಷ್ಟೇ ಅಲ್ಲ. ಹಾಗೇನಾದರೂ ಇದ್ದರೆ ಇದರ ಅವಶ್ಯಕತೆ ಹೆಚ್ಚು ಇರುವುದು ಬಡವರಿಗೇ.. ಖಾಸಗೀಕರಣದ ಆದ್ಯಪ್ರವರ್ತಕರಲ್ಲಿ ಒಬ್ಬರಾದ ಆಡಮ್ ಸ್ಮಿತ್ ಅವರು, ಶಿಕ್ಷಣವನ್ನು ಮಾರುಕಟ್ಟೆಯಿಂದ ಹೊರಗೇ ಇಡಬೇಕಾದುದರ ಅಗತ್ಯವನ್ನು ಸರಿಸುಮಾರು ಮೂರು ಶತಮಾನಗಳ ಹಿಂದೆಯೇ ಒಪ್ಪಿದ್ದರು. ಅವರ ಪ್ರಕಾರ, ಊಳಿಗ ಮಾನ್ಯ ವ್ಯವಸ್ಥೆಯಲ್ಲಿನ ಅಂಧಾಭಿಮಾನ  ಹಾಗೂ ದಬ್ಬಾಳಿಕೆಗಳನ್ನುಹೋಗಲಾಡಿಸಲು ಮಾರುಕಟ್ಟೆ ಮತ್ತು ವಸ್ತುಗಳ ಖರೀದಿ- ಮಾರಾಟಗಳ ಮೂಲಕ ವ್ಯಕ್ತವಾಗುವ ವ್ಯಕ್ತಿಗತ ಆಯ್ಕೆಗಳು ಅತ್ಯುತ್ತಮ ವಿಧಾನಗಳಾಗಿದ್ದವು. ಇದಕ್ಕೆ ವಿವೇಚನೆ, ಮಾಹಿತಿ ಹಾಗೂ ಅರಿವಿನಿಂದ ಕೂಡಿದ ಆಯ್ಕೆಯನ್ನು ಕೈಗೊಳ್ಳುವ ಜನರ ಅಗತ್ಯವಿತ್ತು. ಆದರೆ ಮಾರುಕಟ್ಟೆಯೂ ಕೂಡ ಚೆನ್ನಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಒಳ್ಳೆಯ ಶಿಕ್ಷಣ ಹಾಗೂ ಆರೋಗ್ಯವನ್ನು ಪ್ರತಿಯೊಬ್ಬರಿಗೂ ಒದಗಿಸಬೇಕು ಎಂದು ಅವರು ಒತ್ತಿ ಹೇಳಿದರು.

ಶಿಕ್ಷಣವನ್ನು ಮಾರುಕಟ್ಟೆ ಪ್ರಕ್ರಿಯೆಯಗಳ ಮೂಲಕ ಖರೀದಿಸುವುದು, ಅಂದರೆ  ಹೆಚ್ಚು ಹಣವುಳ್ಳವರು ಉತ್ತಮ ಶಿಕ್ಷಣವನ್ನುಪಡೆದು ಹಾಗೂ ಕಡಿಮೆ ಹಣವುಳ್ಳವರು ಕಳಪೆ ಶಿಕ್ಷಣವನ್ನು ಪಡೆಯುವಂತಾಗುವ  ಸ್ಥಿತಿಯನ್ನು   ಅವರು ಖಂಡಿಸಿದರು. ಪ್ರತಿಯೊಬ್ಬರೂ ಒಳ್ಳೆಯ ಶಿಕ್ಷಣವನ್ನು ಪಡೆಯುವ ಅಗತ್ಯವಿದೆ. ಏಕೆಂದರೆ, ನ್ಯಾಯಯುತವಾದ ಮಾರುಕಟ್ಟೆಗೆ ವಿಚಾರಶೀಲನಾದ, ಮಾಹಿತಿಗಳನ್ನು ಹೊಂದಿರುವ ಬಳಕೆದಾರನೊಬ್ಬ ಇರಲೇಬೇಕಾದುದು ಅತ್ಯಗತ್ಯ. ಅದು ಸಾಧ್ಯವಾಗದಿದ್ದರೆ, ಮಾರುಕಟ್ಟೆಯು ಅತ್ಯುತ್ತಮ ಆಯ್ಕೆಗಳನ್ನು ನೀಡುವ ವ್ಯವಸ್ಥೆಯಾಗುವುದೇ ಇಲ್ಲ, ಬದಲಾಗಿ, ಅಜ್ಞಾನ ಹಾಗೂ ಪ್ರಬಲರ ಮೇಲಾಡಿಸುವಿಕೆ ಮುಂದುವರೆಯುತ್ತದೆ ಎಂದು ಅವರು ಪ್ರತಿಪಾದಿಸಿರುತ್ತಿದ್ದರು.

ಇಂದು ಸಮಾನತೆ ಹಾಗೂ ಸ್ವತಂತ್ರತೆಯ ಮೌಲ್ಯಗಳು ಪ್ರಪಂಚದುದ್ದಗಲಕ್ಕೂ ವ್ಯಾಪಕ ಬೆಂಬಲವನ್ನು ಪಡೆದಿವೆ. ವಂಶ ಪಾರಂಪರ್ಯವಾಗಿ ಲಭ್ಯವಾಗುತ್ತಿದ್ದ ಸವಲತ್ತುಗಳ ಬದಲಾಗಿ ಉನ್ನತ ಹುದ್ದೆಗೆ ತಲುಪಲು ಅರ್ಹತೆ, ಯೋಗ್ಯತೆಗಳೇ ಹೆಬ್ಬಾಗಿಲಾಗುತ್ತಿವೆ ಎಂದು ಭಾವಿಸಲಾಗಿದೆ. ಅರ್ಹತಾವಾದವು ನಿಂತಿರುವುದು ಯಾರು ಮುಂದಕ್ಕೆ ಹೋಗುತ್ತಾರೆ ಎನ್ನುವುದನ್ನು ಪರಿಶ್ರಮ, ಪ್ರೇರಣೆ ಹಾಗೂ ಶ್ರದ್ಧೆ-ಮುಡಿಪುಗಳು ನಿರ್ಧರಿಸುತ್ತವೆ ಎಂಬ ವಿಚಾರದ ಮೇಲೆ. ಆದರೂ ಒಳ್ಳೆಯ ಶಿಕ್ಷಣವನ್ನು ಪಡೆಯುವುದೆನ್ನುವುದು ಮುಖ್ಯವಾಗಿ ಶ್ರೀಮಂತ ಅಥವಾ ಪ್ರಬಲ ಪಾಲಕ/ಪೋಷಕರ ಮನೆಯಲ್ಲಿ ಆಕಸ್ಮಿಕವಾಗಿ ಹುಟ್ಟುವುದನ್ನು ಅವಲಂಬಿಸಿದೆ ಎಂದಾದರೆ, ಖಾಸಗೀಕರಣವೂ ಅದನ್ನೇ ಹೆಚ್ಚಿಸುವುದರಿಂದಾಗಿ, ಅರ್ಹತಾವಾದದ ಪರಿಕಲ್ಪನೆಗೇ ನಿಜಕ್ಕ ಚ್ಯುತಿ ತಂದಿದೆ.